# ಶ್ರೀಮಾತೆಯವರ ಪುಣ್ಯಸ್ಮೃತಿ

ಮೂಲ ಬಂಗಾಳಿ : **ಚಪಲಾಸುಂದರಿ ದತ್ತ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**



*(ಈ ಸ್ಮೃತಿಲೇಖನವು ಲೇಖಕಿಯ ಕಿರಿಯ ಮಗ ಕಾರ್ತಿಕ ಚಂದ್ರ ದತ್ತರ ಮೂಲಕ ಲಭಿಸಿತು.)*

ನನ್ನ ಪತಿಯವರ ಹೆಸರು ಚಂದ್ರಮೋಹನ ದತ್ತ. ಮಾನಸಿಕವಾಗಿ ಹಾಗೂ ಕೌಟುಂಬಿಕವಾಗಿ ಅತ್ಯಂತ ಅಶಾಂತಿಯ ಒಂದು ಕ್ಷಣದಲ್ಲಿ ನನ್ನ ಪತಿಯವರಿಗೆ ಶ್ರೀಮಾತೆಯವರ ಕೃಪಾಲಾಭವುಂಟಾಯಿತು. ಶ್ರೀಮಾತೆಯವರ ಕೃಪೆಯಿಂದಲೇ ಅವರಿಗೆ 'ಉದ್ಬೋಧನ'ದಲ್ಲಿ ಕೆಲಸ ಸಿಕ್ಕಿತು. ಅವರಿಗೆ ಸಂಬಳ ಸಿಗುವುದರ ಜೊತೆಯಲ್ಲೇ ಜಗನ್ಮಾತೆಯ ಕೃಪೆ ಕೂಡ ಲಭಿಸುವಂತಾಯಿತು. ಶ್ರೀಮಾತೆಯವರ ಕೃಪೆಯಿಂದ ನನ್ನ ಪತಿಯವರಿಗೆ ಕೇವಲ ಉದ್ಯೋಗವಷ್ಟೇ ದೊರಕಿದ್ದಲ್ಲ; ನಾವು ಈಗ ವಾಸವಾಗಿರುವ ಮನೆ, ಜಮೀನು, ಮನೆಯಲ್ಲಿರುವ ಪೀಠೋಪಕರಣಗಳು — ಎಲ್ಲವೂ ಅವರ ಕೃಪೆಯಿಂದಾಗಿಯೇ ಲಭಿಸಿದವು. 'ಶ್ರೀಮಾತೆಯವರ ಮನೆ' ('ಉದ್ಬೋಧನ')ಯಲ್ಲಿ ಉದ್ಯೋಗ ದೊರಕಿದ ಕೆಲವೇ ದಿನಗಳಲ್ಲಿ ಶ್ರೀಮಾತೆ ನನ್ನ ಪತಿಗೆ ಮಂತ್ರದೀಕ್ಷೆ ನೀಡಿದರು. ನನ್ನ ಪತಿಯವರ ಪ್ರಾರ್ಥನೆಯಂತೆ ಶ್ರೀಮಾತೆ ಅವರಿಗೆ ತಮ್ಮ ಜಗದ್ಧಾತ್ರೀ ರೂಪವನ್ನು ತೋರಿಸಿಕೊಟ್ಟಿದ್ದರು. ಶ್ರೀಮಾತೆಯವರ ದೇಹತ್ಯಾಗದ ನಂತರ ನನ್ನ ಪತಿ ನನಗೆ ಈ ವಿಷಯವನ್ನು ತಿಳಿಸಿದ್ದರು. ಶ್ರೀಮಾತೆ ಬದುಕಿರುವ ತನಕವೂ ಈ ವಿಷಯವನ್ನು ಬೇರೆ ಯಾರಿಗೂ ಹೇಳಬಾರದೆಂದು ಅವರು ನಿಷೇಧಿಸಿದ್ದರು. ಒಂದು ದಿನ ರಾತ್ರಿ, ಶ್ರೀಮಾತೆಯವರು ನನಗೆ ಮಂತ್ರದೀಕ್ಷೆ ನೀಡಿದಂತೆ ನಾನು ಕನಸು ಕಂಡೆ. ಕನಸಿನಲ್ಲಿ ಕಂಡ ಮಂತ್ರವನ್ನು ನಾನು ಎಚ್ಚೆತ್ತ ನಂತರವೂ ಮರೆಯಲಿಲ್ಲ. ಬೆಳಿಗ್ಗೆ ನಿದ್ದೆ ಬಿಟ್ಟೆದ್ದ ನಂತರ ನಾನು ನನ್ನ ಪತಿಯವರಿಗೆ ಕನಸಿನ ಬಗ್ಗೆ ತಿಳಿಸಿದೆ. ಆಗ ನಾವು ಬಾಗ್‌ಬಜಾರಿನ ನಿವೇದಿತಾ ಲೇನ್‌ನಲ್ಲಿದ್ದ ಒಂದು ಬಾಡಿಗೆ ಮನೆಯಲ್ಲಿದ್ದೆವು. ಶ್ರೀಮಾತೆಯವರ ಮನೆಯಿಂದ ನಮ್ಮ ಮನೆ ತುಂಬ ಹತ್ತಿರ. ಬೆಳಿಗ್ಗೆ ಶ್ರೀಮಾತೆಯವರ ಮನೆಗೆ ಹೋದ ನನ್ನ ಪತಿ ಶ್ರೀಮಾತೆಯವರಿಗೆ ನನ್ನ ಕನಸಿನ ವಿಷಯವನ್ನು ತಿಳಿಸಿದರು. ಎಲ್ಲವನ್ನೂ ಕೇಳಿದ ಶ್ರೀಮಾತೆ ಅವರಿಗೆ ಹೇಳಿದರು: ''ಸೊಸೆಗೆ (ಅಂದರೆ ನನಗೆ) ಐದು ಅಳಲೆ ಕಾಯಿಯೊಂದಿಗೆ ಹೋಗಿ ಗಂಗಾಸ್ನಾನ ಮಾಡಿ, ಒಂದು ಹೊಸ ಸೀರೆ ಉಟ್ಟುಕೊಂಡು ನನ್ನ ಬಳಿಗೆ ಬರಲು ಹೇಳು.'' ನನ್ನ ಬಳಿ ಹೊಸ ಸೀರೆಯಿರಲಿಲ್ಲ. ಶ್ರೀಮಾತೆಯವರೇ ಒಂದು ಹೊಸ ಸೀರೆಯನ್ನು ನನಗೆ ಕಳುಹಿಸಿಕೊಟ್ಟರು. ಮರುದಿನ ಅವರು ನನಗೆ ದೀಕ್ಷೆಯನ್ನು ದಯಪಾಲಿಸಿದರು. ಅನಂತರ ಹೇಳಿದರು, ''ಕನಸಿನಲ್ಲಿ ಪಡೆದ ಮಂತ್ರವನ್ನು ಮೊದಲು ಜಪಿಸು. ಈ ಹೊಸ ಮಂತ್ರವನ್ನು ಆಮೇಲೆ ಜಪಿಸು.''

ನಾವು ಬಾಡಿಗೆಗೆ ಇದ್ದ ಮನೆಯ ಮಾಲೀಕ ಹಾಗೂ ಅವನ ಪತ್ನಿಯವರಿಂದಾಗಿ ನಮಗೆ ತುಸು ಕಷ್ಟವುಂಟಾಯಿತು. ನನ್ನ ದೊಡ್ಡ ಮಗಳು ಇಂದು (ಶ್ರೀಮಾತೆ ಅವಳನ್ನು ಪ್ರೀತಿಯಿಂದ 'ಬಡೋ ಖೂಕಿ' (ದೊಡ್ಡ ಮಗಳು) ಎಂದು ಕರೆಯುತ್ತಿದ್ದರು) ಹಾಗೂ ದೊಡ್ಡ ಮಗ ಅಮೂಲ್ಯ ಇವರಿಗೆ ಆಗ ಆರು ಮತ್ತು ಎರಡು ವರ್ಷ ವಯಸ್ಸು. ಅವರು ಆಟಿಕೆಗಳೊಂದಿಗೆ ಆಟವಾಡುತ್ತಿದ್ದಾಗ ಮನೆ ಮಾಲೀಕ ಅಥವಾ ಅವನ ಪತ್ನಿ ಬಂದು, ಅವರ ಆಟಿಕೆಗಳನ್ನೆಲ್ಲಾ ಮನೆಯ ಹೊರಗೆ ಎಸೆದುಬಿಡುತ್ತಿದ್ದರು. ಮನೆ

ಕೊಳೆಯಾಗುತ್ತಿದೆ ಎಂದು ಅವರು ಹೇಳುತ್ತಿದ್ದರು. ಇದರಿಂದಾಗಿ ಅಕ್ಕ-ತಮ್ಮಂದಿರ ಆಟ ನಿಂತುಹೋಯಿತು. ಮನೆ ಮಾಲೀಕರನ್ನು ನೋಡಿದರೆ ಸಾಕು, ಮಕ್ಕಳು ಹೆದರಿಕೊಂಡು, ಮನೆಯೊಳಗೆ ಹೋಗಿ ಅಡಗಿಕೊಳ್ಳುತ್ತಿದ್ದರು. ಆದರೆ ಮಾಲೀಕರ ಈ ದೌರ್ಜನ್ಯ ನಮಗೆ ಶಾಪವೇ ವರವಾದಂತೆ ಎಂದು ಆಗ ಯಾರಿಗೆ ಗೊತ್ತಿತ್ತು! ಮಕ್ಕಳ ಬಾಡಿದ ಮುಖ ನೋಡಿ ನನಗೆ ಬಹಳ ಸಂಕಟವಾಗುತ್ತಿತ್ತು. ಒಂದು ದಿನ ರಾತ್ರಿ ಹೊತ್ತು ನನ್ನ ಪತಿ 'ಶ್ರೀಮಾತೆಯವರ ಮನೆ'ಯಿಂದ ಮನೆಗೆ ಮರಳಿ ಬಂದಾಗ ನಾನು ಹೇಳಿದೆ, ''ದೊಡ್ಡ ಮಗಳ (ಇಂದು) ಹಾಗೂ ಅಮೂಲ್ಯನ ಕಷ್ಟವನ್ನು ನೋಡಿ ಸಹಿಸಲಾಗುತ್ತಿಲ್ಲ. ಒಂದು ಕೆಲಸ ಮಾಡಿ. ನಿಮಗೇನೂ ಮಾಡಲಾಗದಿದ್ದರೆ, ಶ್ರೀಮಾತೆಯವರ ಬಳಿಗೆ ಹೋಗಿ ಎಲ್ಲವನ್ನೂ ಹೇಳಿ. ಅವರು ಖಂಡಿತ ಒಂದಲ್ಲ ಒಂದು ದಾರಿ ತೋರಿಸಿಕೊಡುತ್ತಾರೆ.'' ನನ್ನ ಪತಿಯವರು ಮರುದಿನ ಬೆಳಿಗ್ಗೆ ಶ್ರೀಮಾತೆಯವರ ಬಳಿಗೆ ಹೋಗಿ ಎಲ್ಲವನ್ನೂ ತಿಳಿಸಿದರು. ಕರುಣಾಮಯಿ ಶ್ರೀಮಾತೆ ಎಲ್ಲವನ್ನೂ ಕೇಳಿಸಿಕೊಂಡು, ಕೂಡಲೇ ಶರತ್ ಮಹಾರಾಜರನ್ನು(ಸ್ವಾಮಿ ಶಾರದಾನಂದರು) ಕರೆದು ಹೇಳಿದರು: ''ಶರತ್, ಚಂದುಗೆ ಮನೆ ಮಾಡುವುದಕ್ಕೆ ಒಂದು ಸ್ಥಳ ಹುಡುಕು. ಅವರ ಮನೆ ಮಾಲೀಕ ಅವರ ಮಕ್ಕಳಿಗೆ ಆಡಲು ಬಿಡುತ್ತಿಲ್ಲ. ಇದೆಂಥ ನಿಷ್ಠುರತೆ!'' ಬಳಿಕ ನನ್ನ ಪತಿಯವರನ್ನು ಕರೆದು ಹೇಳಿದರು, ''ಚಂದು, ಸೊಸೆ ಹಾಗೂ ಮಕ್ಕಳನ್ನು ಸದ್ಯಕ್ಕೆ ನಿಮ್ಮ ಊರಿಗೆ (ಢಾಕಾ ಜಿಲ್ಲೆಯ ಗಾವುಪಾಡಾ ಗ್ರಾಮದಲ್ಲಿ ನಮ್ಮ ಮನೆಯಿದ್ದುದು) ಕರೆದುಕೊಂಡು ಹೋಗಿ ಬಿಟ್ಟು ಬಾ. ಮನೆ ನಿರ್ಮಾಣವಾದ ಮೇಲೆ ಒಂದೇ ಬಾರಿಗೆ ಅವರನ್ನು ಹೊಸ ಮನೆಗೆ ಕರೆದುಕೊಂಡು ಬರುವಿಯಂತೆ.'' ಶ್ರೀಮಾತೆಯವರ ಸಲಹೆಯಂತೆ ನನ್ನ ಪತಿ ನಮ್ಮನ್ನು ಊರಿಗೆ ಕರೆದುಕೊಂಡು ಹೋಗಿ ಬಿಟ್ಟುಬಂದರು. ಶರತ್ ಮಹಾರಾಜರ ಪ್ರಯತ್ನದಿಂದಾಗಿ, ಬಾಗ್‌ಬಜಾರಿನ ಬೋಸ್‌ಪಾರಾದಲ್ಲಿ ನಮ್ಮ ಮನೆ ನಿರ್ಮಾಣವಾಯಿತು. ಸ್ವತಃ ಶರತ್ ಮಹಾರಾಜರೇ ಅಲ್ಲಿ ಭೂಮಿಪೂಜೆ ಮಾಡಿದರು. ಅವರ ನಿರ್ದೇಶನದಂತೆ ಗಣೇನ್ ಮಹಾರಾಜರೇ ನಿಂತು ಮನೆಯ ನಿರ್ಮಾಣ ಮಾಡಿದರು. ಅನಂತರ ನಮ್ಮನ್ನು ಊರಿನಿಂದ ಕಲ್ಕತ್ತೆಗೆ ಕರೆದುಕೊಂಡು ಬಂದರು. ಗೃಹಪ್ರವೇಶದಂದು ಶರತ್ ಮಹಾರಾಜ್ ಬರಲಿಲ್ಲ. ಆದರೆ 'ಶ್ರೀಮಾತೆಯವರ ಮನೆ'ಯಿಂದ ಬಹಳ ಮಂದಿ ಸಾಧು-ಬ್ರಹ್ಮಚಾರಿಗಳು ನಮ್ಮ ಮನೆಗೆ ಬಂದಿದ್ದರು. ಶ್ರೀರಾಮಕೃಷ್ಣರ ಮತ್ತು ಶ್ರೀಮಾತೆಯವರ ಚಿತ್ರಪಟಗಳನ್ನು ಅಲ್ಲಿ ಪೂಜಿಸಲಾಯಿತು. ಸಾಧುಗಳೊಬ್ಬರು ಪೂಜೆ ಮಾಡಿದರು. ಶ್ರೀರಾಮಕೃಷ್ಣರ ಮತ್ತು ಶ್ರೀಮಾತೆಯವರ ಚಿತ್ರಗಳನ್ನು ಶ್ರೀಮಾತೆಯವರೇ ಸ್ವತಃ ಪೂಜೆ ಮಾಡಿ 'ಉದ್ಬೋಧನ'ದಿಂದ ಕಳುಹಿಸಿಕೊಟ್ಟಿದ್ದರು. ಅದೇ ಚಿತ್ರಗಳಿಗೆ ಪೂಜೆ ಮಾಡಲಾಗಿತ್ತು. ನಮ್ಮ ಮನೆಯ ದೇವರಕೋಣೆಯಲ್ಲಿ ಇಂದಿಗೂ ಅದೇ ಭಾವಚಿತ್ರಗಳನ್ನು ಪ್ರತಿದಿನ ನಾವು ಪೂಜಿಸುತ್ತ ಬಂದಿದ್ದೇವೆ. ಅಂದು ಸಾಧು-ಬ್ರಹ್ಮಚಾರಿಗಳು ನಮ್ಮ ಹೊಸ ಮನೆಯಲ್ಲಿ ಶ್ರೀರಾಮನಾಮ ಸಂಕೀರ್ತನೆ ಮಾಡಿದ್ದರು. ಅವರೆಲ್ಲ ನಮ್ಮ ಮನೆಯಲ್ಲಿ ಅಂದು ಪ್ರಸಾದ-ಭೋಜನವನ್ನೂ ಕೂಡ ಸ್ವೀಕರಿಸಿದ್ದರು. ಅಕ್ಕಿ, ಬೇಳೆ ಇತ್ಯಾದಿಗಳನ್ನೆಲ್ಲ ಶರತ್ ಮಹಾರಾಜರೇ ಖುದ್ದಾಗಿ ವ್ಯವಸ್ಥೆ ಮಾಡಿದ್ದರು; ಆದರೆ ಇದರ ಹಿಂದಿನಿಂದ ಎಲ್ಲವನ್ನೂ ಮಾಡಿಸಿದವರು ಸ್ವಯಂ ಶ್ರೀಮಾತೆಯವರೇ! ಆ ದಿನ ನನಗೆ ಅದೆಂಥ ಆನಂದವುಂಟಾಯಿತು ಎಂಬುದನ್ನು ಮಾತಿನ ಮೂಲಕ ವಿವರಿಸಲು ಸಾಧ್ಯವಿಲ್ಲ! ಈಗ ನನಗೆ ವಯಸ್ಸಾಗಿದೆ. ಅನೇಕ ನೆನಪು, ಘಟನೆಗಳೆಲ್ಲ ವಿಸ್ಮೃತಿಯ ಹಿನ್ನೆಲೆಯಲ್ಲಿ ಮುಳುಗಿ ಹೋಗಿದೆ. ನೆನಪಿನಲ್ಲಿ ಉಳಿದ ನಾಲ್ಕೈದು ಘಟನೆಗಳನ್ನು ಇಲ್ಲಿ ವಿವರಿಸಲು ಯತ್ನಿಸುತ್ತೇನೆ.

ನನ್ನ ಪತಿಯವರು ಸಾಮಾನ್ಯವಾಗಿ 'ಉದ್ಬೋಧನ'ದ ಪುಸ್ತಕಗಳನ್ನು ತೆಗೆದುಕೊಂಡು ಶ್ರೀರಾಮಕೃಷ್ಣರ, ಸ್ವಾಮೀಜಿಯವರ ಜಯಂತಿಯ ದಿನಗಳಲ್ಲಿ ಮಾರಾಟ ಮಾಡಲು ಬಾಂಕುರ, ಮೇದಿನೀಪುರ ಮೊದಲಾದ ಕಡೆಗಳಿಗೆ ಹೋಗುತ್ತಿದ್ದರು. ಆಗ ನನ್ನ ಮಕ್ಕಳಿನ್ನೂ ಚಿಕ್ಕವರು; ಅಂಗಡಿಯಿಂದ ಸಾಮಾನುಗಳನ್ನು ಕೊಂಡುಕೊಂಡು ತರಲು ಬೇರೆ ಯಾರೂ ಇರಲಿಲ್ಲ. ಶ್ರೀಮಾತೆಗೆ ಇದೆಲ್ಲವೂ ತಿಳಿದಿತ್ತು. ಆದ್ದರಿಂದಲೇ ಅವರು ಯಾರಾದರೂ ಬ್ರಹ್ಮಚಾರಿ ಮಹಾರಾಜರಿಗೆ, ಅಥವಾ ಬೇರೆ ಯಾರಿಗಾದರೂ ಹೇಳಿ ಒಳ್ಳೆಯ ತರಕಾರಿಗಳನ್ನೆಲ್ಲ ಕಳುಹಿಸಿಕೊಡುತ್ತಿದ್ದರು. ನನ್ನ ಪತಿಗೆ ಅವರು ಹೇಳುತ್ತಿದ್ದರು: ''ಚಂದು, ನೀನು ಹೊರಗಡೆ ಹೋಗುವಾಗ ಸೊಸೆಗೆ ಹೇಳು, ಏನೇನು ಸಾಮಾನುಗಳು ಬೇಕಾಗಿವೆ ಅವನ್ನೆಲ್ಲ 'ದೊಡ್ಡ ಮಗಳ' ಮೂಲಕ ಅಥವಾ ಅವಳೇ ಬಂದು ನನಗೆ ತಿಳಿಸಲಿ.'' ಒಂದು ದಿನ ಶ್ರೀಮಾತೆಯವರ ಮನೆಗೆ ಹೋಗಿದ್ದೆ; ಹೋಗುವಾಗ ನಾನು ಉಟ್ಟಿದ್ದ ಸೀರೆ ಹೊಸದಾಗಿತ್ತು; ಆದರೆ ಮನೆಯಲ್ಲಿ ಮೊಳೆ ತಗುಲಿ, ಅದು ಹರಿದು ಹೋಗಿತ್ತು. ಹರಿದ ಜಾಗದಲ್ಲಿ ಹೊಲಿದು ಬಿಟ್ಟಿದ್ದೆ. ಶ್ರೀಮಾತೆಯವರ ಕಣ್ಣಿಗೆ ಅದು ಬಿತ್ತು. ಅವರಿಗೆ ಪ್ರಣಾಮ ಮಾಡುವಾಗ ಅವರು ಹೇಳಿದರು, ''ಸೊಸೆಯಮ್ಮ, ಯಾವತ್ತೂ ಹೊಲಿದು ಸರಿಪಡಿಸಿದ ಸೀರೆ ಉಡಬೇಡ, ನೆನಪಿಟ್ಟುಕೋ.'' ಅಂದಿನಿಂದ ನಾನು ಎಂದಿಗೂ ಹೊಲಿದ ಸೀರೆಯನ್ನು ಉಡಲಿಲ್ಲ. ಇನ್ನೊಂದು ದಿನ ಶ್ರೀಮಾತೆ ನನಗೆಂದರು: ''ಸೊಸೆ, ಒಂದು ವಿಷಯವನ್ನು ನೆನಪಿನಲ್ಲಿಡು. ಹುಟ್ಟಿನ ಸೂತಕ, ಸಾವಿನ ಸೂತಕ ಹಾಗೂ (ಸತ್ತವರ) ವಾರ್ಷಿಕ ಸೂತಕದ ಸಂದರ್ಭಗಳಲ್ಲಿ ಎಂದೂ ಶ್ರೀರಾಮಕೃಷ್ಣರ ಯಾವುದೇ ಕೆಲಸವನ್ನು ಮಾಡಬೇಡ. ದೇವರ ಕೋಣೆಗೂ ಹೋಗಬೇಡ.'' ಅಂದಿನಿಂದ ನಾನು ಸೂತಕದ ದಿನಗಳಲ್ಲಿ ಬೇರೆಯವರಿಗೆ ಹೇಳಿ ಶ್ರೀರಾಮಕೃಷ್ಣರ ಪೂಜೆ ಮಾಡಿಸುತ್ತಿದ್ದೆ. ಶ್ರೀಮಾತೆಯವರು ಬದುಕಿದ್ದ ತನಕ ನನಗೆ ಎಂದಿಗೂ ಸೀರೆ ಕೊಂಡುಕೊಳ್ಳಬೇಕಾಗಿ ಬರಲಿಲ್ಲ. ಶ್ರೀಮಾತೆಯವರೇ ಎಲ್ಲವನ್ನೂ ಕೊಡುತ್ತಿದ್ದರು. ಶ್ರೀಮಾತೆ ದೇಹತ್ಯಾಗ ಮಾಡಿದ ನಂತರ

ಅದೇ ರೀತಿ ಶರತ್ ಮಹಾರಾಜರೂ ನಮಗೆ ಯಾವುದೇ ರೀತಿಯ ಕೊರತೆಯಾಗದಂತೆ ನೋಡಿಕೊಳ್ಳುತ್ತಿದ್ದರು.

ಚಿಕ್ಕಂದಿನಿಂದಲೇ ನಾನು ಅಡುಗೆಯಲ್ಲಿ ಪಳಗಿದ್ದೆ. ತೆಂಗಿನ ಕಾಯಿಯನ್ನು ಸಣ್ಣದಾಗಿ ಅವಲಕ್ಕಿಯ ಗಾತ್ರದಷ್ಟಾಗಿ ಹೆಚ್ಚಿ, ಅದನ್ನು ಹದವಾಗಿ ಸಕ್ಕರೆಪಾಕದಲ್ಲಿ ಕರಿಯುತ್ತಿದ್ದೆ. ಅದು ಅಚ್ಚ ಬಿಳಿ ಬಣ್ಣದಿಂದ ಕೂಡಿ, ಗರಿಗರಿಯಾಗಿ ಇರುತ್ತಿತ್ತು. ಅದನ್ನು ನನ್ನವರ ಮೂಲಕ ಶ್ರೀಮಾತೆಯವರ ಬಳಿಗೆ ಕಳುಹಿಸಿಕೊಡುತ್ತಿದ್ದೆ. ಶ್ರೀಮಾತೆ ಕೃಪೆ ತೋರಿ, ನಾನು ತಯಾರಿಸಿದ ಆ ಸಾಧಾರಣ ಪದಾರ್ಥವನ್ನು ಶ್ರೀರಾಮಕೃಷ್ಣರಿಗೆ ನೈವೇದ್ಯ ಮಾಡುತ್ತಿದ್ದರು. ಸಾಧುಗಳು ಹಾಗೂ ಭಕ್ತರು ಪ್ರಸಾದ ಸ್ವೀಕರಿಸಿ ಸಂತಸಪಡುತ್ತಿದ್ದರು. ಶ್ರೀಮಾತೆ ಹಾಗೂ ಶರತ್ ಮಹಾರಾಜರು ನನ್ನ ಅಡುಗೆಯನ್ನು ತುಂಬ ಇಷ್ಟಪಡುತ್ತಿದ್ದರು. ನಾನು ತಯಾರಿಸಿದ ಆಮ್‌ಸತ್ತ್ವ, ಡಾಲೇರ್ ಬಡಿ, ಕಸುಂದಿ (ಬಂಗಾಳಿ ಖಾದ್ಯಗಳು) — ಇವನ್ನು ಶ್ರೀಮಾತೆ, ಶರತ್ ಮಹಾರಾಜ್ ಹಾಗೂ 'ಉದ್ಬೋಧನ'ದ ಬೇರೆ ಮಹಾ ರಾಜರುಗಳು ತುಂಬ ಇಷ್ಟಪಡುತ್ತಿದ್ದರು. ಚಳಿಗಾಲದಲ್ಲಿ ನಾನು ರಸಪೂಲಿ ಹಾಗೂ ಪಾಟಿಸಪಾಟ ಇವನ್ನು ತಯಾರಿಸಿ ಕಳುಹಿಸಿ ಕೊಡುತ್ತಿದ್ದೆ. ಶ್ರೀಮಾತೆ ದಯೆ ತೋರಿ ಅವನ್ನೆಲ್ಲ ಶ್ರೀರಾಮಕೃಷ್ಣರಿಗೆ ನೈವೇದ್ಯ ಮಾಡುತ್ತಿದ್ದರು. ನಡುನಡುವೆ 'ಉದ್ಬೋಧನ'ಕ್ಕೆ ಒಂದೆರಡು ಬಗೆಯ ಸಸ್ಯಾಹಾರಿ, ಮಾಂಸಹಾರಿ ಖಾದ್ಯಗಳನ್ನು ತಯಾರಿಸಿ ಕಳುಹಿಸಿಕೊಡುತ್ತಿದ್ದೆ. ನನ್ನ ಅಡುಗೆಯನ್ನು ಸ್ವೀಕರಿಸಿ ಶ್ರೀಮಾತೆ, ''ಸೊಸೆಯಮ್ಮ ತುಂಬಾ ಚೆನ್ನಾಗಿ ಅಡುಗೆ ಮಾಡು ತ್ತಾಳೆ'' ಎನ್ನುತ್ತಿದ್ದರು. ಒಂದು ದಿನ ಒಲೆಯ ಮೇಲೆ ಪಾತ್ರೆಯಲ್ಲಿ ಬೇಳೆಯಿತ್ತು; ಬೇಳೆಯನ್ನು ಹುರಿದು ಅದು ತುಸು ಕೆಂಪಾದಾಗ, ಅದಕ್ಕೆ ಬೇರೊಂದು ಪಾತ್ರೆಯಿಂದ ನೀರನ್ನು ಸುರಿಯುವ ವೇಳೆಗೆ, ಕೈಜಾರಿ ನೀರಿನ ಪಾತ್ರೆಯು ಬೇಳೆಯ ಪಾತ್ರೆಯ ಮೇಲೆ ಬಿದ್ದುಬಿಟ್ಟಿತು. ಬೇಳೆಯ ಪಾತ್ರೆಯಲ್ಲಿದ್ದ ಬಿಸಿನೀರು ನನ್ನ ಮೈಕೈಗೆಲ್ಲಾ ಚೆಲ್ಲಿತು. ನನ್ನ ಮೈಯಲ್ಲಿ ಆಗ ಎಂಥ ಉರಿಯೆದ್ದಿತೆಂದರೆ, ನನಗೆ ಸಹಿಸುವುದಕ್ಕೆ ಸಾಧ್ಯವಾಗಲಿಲ್ಲ. ನಾನು ನೋವಿನಿಂದ ಬೊಬ್ಬಿಟ್ಟೆ. ನನ್ನ ಮನೆಯವರು ಆಗ ಮನೆಯಲ್ಲಿದ್ದರು. ನಾನು ಚೀರಿದ ಸದ್ದನ್ನು ಕೇಳಿ ಓಡಿ ಬಂದ ಅವರು, ನನ್ನ ಅವಸ್ಥೆಯನ್ನು ಕಂಡು, ದೊಡ್ಡಮಗಳನ್ನು ನನ್ನ ಬಳಿಯಲ್ಲೇ ಇರಲು ಹೇಳಿ, ಅವರು ಶ್ರೀಮಾತೆಯವರ ಬಳಿಗೆ ಓಡಿಹೋದರು. ಶ್ರೀಮಾತೆಯವರಿಗೆ ಎಲ್ಲವನ್ನೂ ತಿಳಿಸಿದಾಗ, ಅವರು ಒಂದು ಸಣ್ಣ ಪಾತ್ರೆಯಲ್ಲಿ ಸಾಸಿವೆ ಎಣ್ಣೆಯನ್ನು ತೆಗೆದುಕೊಂಡು, ಶ್ರೀರಾಮಕೃಷ್ಣರ ನಾಮವನ್ನು ಜಪಿಸಿ, ನನ್ನ ಪತಿಯವರ ಕೈಗೆ ಕೊಟ್ಟರು. ''ಇದನ್ನು ಈಗಲೇ ತೆಗೆದುಕೊಂಡು ಹೋಗಿ, ಗುಳ್ಳೆಯೆದ್ದ ಜಾಗಕ್ಕೆ ಹಚ್ಚು'' ಎಂದರು. ನನ್ನವರು ಬಂದು, ಹಾಗೆಯೇ ಮಾಡಿದರು. ಏನೆಂದು ಹೇಳಲಿ! ಒಂದು ಅದ್ಭುತವೇ ನಡೆದು ಹೋಯಿತು. ಕೆಲವೇ ನಿಮಿಷಗಳಲ್ಲಿ ಅಂತಹ ಉರಿ, ನೋವು ಅದೆಲ್ಲಿ ಮಾಯವಾಗಿ ಹೋಯಿತೋ!

ನನ್ನ ದೊಡ್ಡ ಮಗ ಅಮೂಲ್ಯ ಭಾರೀ ತುಂಟನಾಗಿದ್ದ. ಅವನ ತುಂಟತನದಿಂದ ನಮಗೆಲ್ಲಾ ಸಾಕಾಗಿ ಹೋಗಿತ್ತು. ನಮ್ಮ ಮನೆಯ ಮುಂದೆ ಒಂದು ಕೊಳವಿತ್ತು. ಯಾವಾಗಲೆಂದರೆ ಆಗ ಅವನು ಆ ಕೊಳಕ್ಕೆ ಇಳಿದು ಚೆಲ್ಲಾಟವಾಡುತ್ತಿದ್ದ. ನಾನು ಗಂಗಾಸ್ನಾನ ಮಾಡಲು ಹೊರಟರೆ, ನನ್ನೊಂದಿಗೆ ಬರಲು ಅವನು ಹಠ ಹಿಡಿಯುತ್ತಿದ್ದ. ಒಂದುವೇಳೆ ಕರೆದುಕೊಂಡು ಹೋದರೆ, ನೀರಿನಲ್ಲಿ ಇಳಿದು, ಅಲ್ಲಿಂದ ಎದ್ದು ಬರುತ್ತಿರಲಿಲ್ಲ. ಒಂದು ದಿನ ಶ್ರೀಮಾತೆಯವರ ಬಳಿಗೆ ಹೋಗಿದ್ದೆ; ಜೊತೆಗೆ ಅಮೂಲ್ಯನೂ ಇದ್ದ. ಶ್ರೀಮಾತೆಯವರಿಗೆ ಅವನ ತುಂಟತನದ ಕತೆಯನ್ನೆಲ್ಲ ಹೇಳಿದೆ. ''ಅಮ್ಮಾ, ಇವನನ್ನು ಸ್ವಲ್ಪ ಶಾಂತನನ್ನಾಗಿ ಮಾಡಿ'' ಎಂದೆ. ಶ್ರೀಮಾತೆ ನಗುತ್ತ, ''ಸೊಸೆಯಮ್ಮನ ಮಾತನ್ನು ಕೇಳು! ಚಿಕ್ಕ ಮಗು ತುಂಟತನ ಮಾಡಿದಿದ್ದರೆ ಹೇಗಂತೆ, ಮತ್ತಿನ್ನೇನು ಮಂದಬುದ್ಧಿಯ ಮಗುವಿನಂತೆ ತಾಯಿಯ ಸೆರಗಿನ ಹಿಂದೆ ಅಡಗಿ ಕುಳಿತುಕೊಳ್ಳಬೇಕೆ? ಅವನು ದೊಡ್ಡವನಾಗುತ್ತಲೇ ಎಲ್ಲ ಸರಿಹೋಗುವುದು. ಅದಕ್ಕಾಗಿ ನೀನು ಚಿಂತಿಸಬೇಡ'' ಎಂದರು. ನಾನಂದೆ, ''ಅವನನ್ನು ಬೆಳೆಸುವುದೇ ಈಗ ಕಷ್ಟವಾಗಿಬಿಟ್ಟಿದೆ. ರಸ್ತೆಯಲ್ಲಿ ಅಲ್ಲಿಲ್ಲಿ ಹೋಗುತ್ತಿದ್ದಾಗ, ಇದ್ದಕ್ಕಿದ್ದಂತೆ ಕೊಳಕ್ಕಿಳಿದು ಚೆಲ್ಲಾಟವಾಡುತ್ತಾನೆ. ಗಾಡಿಯ ಅಡಿಗೆ ಬಿದ್ದು ಎಲ್ಲಿ ಸಿಕ್ಕಿಹಾಕಿಕೊಳ್ಳುವನೋ, ಎಲ್ಲಿ ನೀರಿನಲ್ಲಿ ಮುಳುಗಿ ಹೋಗುವನೋ ಎಂದೆಲ್ಲ ಭಯವಾಗುತ್ತಿದೆ. ಅವನ ತುಂಟತನ ಕಡಿಮೆಯಾಗುವಂತೆ ದಯವಿಟ್ಟು ನೀವು ಏನಾದರೂ ಮಾಡಿ.'' ಶ್ರೀಮಾತೆ ನಗುತ್ತ ಅಮೂಲ್ಯನನ್ನು ತಮ್ಮ ಬಳಿಗೆ ಕರೆದು, ಅವನ ತಲೆಯ ಮೇಲೆ ಕೈಯಾಡಿಸುತ್ತ ಪ್ರೀತಿಯಿಂದ, ''ಸೊಸೆಯಮ್ಮ, ನಿನ್ನ ಅಮೂಲ್ಯ ಇನ್ನುಮುಂದೆ ಮೊದಲಿನ ಹಾಗೆ ತುಂಟತನ ಮಾಡಲಾರ'' ಎಂದರು. ಆಶ್ಚರ್ಯವೆಂದರೆ ಅದೇ; ಇದಾದ ನಂತರ ಅಮೂಲ್ಯ ಶಾಂತನಾಗಿಬಿಟ್ಟ! ಮುಂದೆ ರಸ್ತೆಗಿಳಿದಾಗ ಕೊಳಕ್ಕೆ ಅವನು ಇಳಿದದ್ದನ್ನು ನಾನೆಂದೂ ಕಂಡಿಲ್ಲ.

ಒಂದು ಸಲ ಶ್ರೀಮಾತೆಯವರು ಒಂದು ಹಿಡಿ ಅಕ್ಕಿಯನ್ನು ನನ್ನ ಪತಿಯವರ ಕೈಗೆ ಕೊಟ್ಟು ಹೇಳಿದರು, ''ನಿನ್ನ ಮನೆಯ ಅಕ್ಕಿಯ ಪಾತ್ರೆಗೆ ಈ ಅಕ್ಕಿಯನ್ನು ಹಾಕಿ ಇಟ್ಟರು. ನಿನಗೆಂದೂ ಅನ್ನದ ಅಭಾವವುಂಟಾಗದು.'' ಅವರಿಗೆ ಶ್ರೀಮಾತೆ ತಮ್ಮ ಕೂದಲು, ಉಗುರು ಹಾಗೂ ತಾವು ಧರಿಸುತ್ತಿದ್ದ ಬಟ್ಟೆಬರೆ ನೀಡಿದ್ದರು. ನಮ್ಮ ಮನೆಯಲ್ಲಿ ಅವುಗಳಿಗೆ ಪ್ರತಿದಿನ ಪೂಜೆ ಮಾಡುತ್ತ ಬಂದಿದ್ದೇವೆ.* ಒಂದು ದಿನ ಶ್ರೀಮಾತೆ ನನ್ನವರಿಗೆ ಹೇಳಿದ್ದರು: ''ನಿನಗೇಕೆ ಭಯ? ನಿನ್ನ ಕುಟುಂಬವೆಂದರೆ,

---

* ಲೇಖಕಿಯ ಕೊನೆಯ ಮಗ ಕಾರ್ತಿಕಚಂದ್ರ ದತ್ತ ತಿಳಿಸುತ್ತಾನೆ: ''ನನ್ನ ತಾಯಿಯವರ ಮರಣಕ್ಕೆ (೧೯೭೫ರ ಮೇ ೨೫) ಒಂದು ತಿಂಗಳ ಮೊದಲು, ದೇವರ ಕೋಣೆಯಿಂದ ಈ ವಸ್ತುಗಳು ಕಳ್ಳತನವಾಗಿ ಹೋದವು. ತಾಯಿ ಮರಣ ಹೊಂದುವಾಗ ಅವರಿಗೆ ೮೮ ವರ್ಷ ವಯಸ್ಸು ಆಗಿತ್ತು. *(–ಸಂ)*

ಇವೆಲ್ಲ ಯಾವ ಸಂಸಾರದಲ್ಲಿಲ್ಲ ಹೇಳು? ಅವೆಲ್ಲ ಇದ್ದೇ ಇರುತ್ತವೆ. ಶ್ರೀರಾಮಕೃಷ್ಣರ ಕೃಪೆಯಿಂದ ಅವೆಲ್ಲ ನಿನ್ನನ್ನು ಸ್ಪರ್ಶಿಸಲಾರವು.'' ನಾವು ಜೀವನದಲ್ಲಿ ಕೆಲವು ಭಾರೀ ಸಂಕಟವನ್ನು ಅನುಭವಿಸಿದ್ದೇವೆ.[೨] ಆದರೆ ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆಯವರ ಆಶೀರ್ವಾದದಿಂದ ನನಗೆ ಎಷ್ಟೇ ಆಘಾತವುಂಟಾಗಿದ್ದರೂ, ನನ್ನ ಪತಿಯವರಿಗೆ ಎಂದೂ ಆಘಾತವುಂಟಾಗಲಿಲ್ಲ. ಶ್ರೀಮಾತೆಯವರ ಆಶೀರ್ವಾದದಿಂದಲೇ ಅದು ಸಾಧ್ಯವಾಯಿತು ಎಂದು ಆಗ ನನಗೆ ಅರ್ಥವಾಯಿತು.

ನನ್ನ ಭಾವಮೈದುನ (ಚಂದ್ರಮೋಹನ ದತ್ತರ ತಮ್ಮ) ಲಾಲಮೋಹನ ದತ್ತರು ಕೂಡ ನನ್ನ ಪತಿಯವರೊಂದಿಗೆ ಶ್ರೀಮಾತೆಯವರ ಮನೆಗೆ ಹೋಗುತ್ತಿದ್ದರು. ಅವರು 'ಉದ್ಬೋಧನ ಕಾರ್ಯಾಲಯ'ದಲ್ಲಿ ಸ್ವಯಂಸೇವಕರಾಗಿ ಕೆಲಸ ಮಾಡುತ್ತಿದ್ದರು. 'ಉದ್ಬೋಧನ'ದ ಪುಸ್ತಕಗಳನ್ನು ವಿವಿಧ ಪ್ರದೇಶಗಳಿಗೆ ಕೊಂಡೊಯ್ದು, ಹಲವು ಸ್ಥಳಗಳಲ್ಲಿ ಓಡಾಡಿ ಮಾರಾಟ ಮಾಡುತ್ತಿದ್ದರು. ಅವರು ಶ್ರೀಮಾತೆಯವರಿಗೆ ಹೇಳಿದ್ದರು, ''ಅಮ್ಮಾ, ನನ್ನ ಸಂಬಳದಿಂದಲೇ ಜೀವನ ನಡೆಸುತ್ತ ನಾನು ದೇಹತ್ಯಾಗ ಮಾಡುವಂತಾಗಲಿ ಎಂದು ನನಗೆ ಆಶೀರ್ವಾದ ಮಾಡಿ'' ಎಂಬುದಾಗಿ. ಶ್ರೀಮಾತೆ ಅಂತೆಯೇ ಅವರಿಗೆ ಆಶೀರ್ವಾದ ಮಾಡಿದ್ದರು. ಅವರು 'ಉದ್ಬೋಧನ'ದಲ್ಲಿ ೫೧ ವರ್ಷ ಕಾಲ ಕೆಲಸ ಮಾಡುತ್ತಲೇ ತೀರಿಕೊಂಡರು.

ಶ್ರೀಮಾತೆ ತಮ್ಮ ಕೊನೆಗಾಲದಲ್ಲಿ ಅತ್ಯಂತ ಅನಾರೋಗ್ಯಕ್ಕೆ ಒಳಗಾಗಿದ್ದರು. ಕೊನೆಯ ಬಾರಿ ಶ್ರೀಮಾತೆ ಜಯರಾಮಬಾಟಿಯಿಂದ ಕಲ್ಕತ್ತೆಯ 'ಉದ್ಬೋಧನ'ಕ್ಕೆ ಬಂದಾಗ ಅವರ ದೇಹ ಅತ್ಯಂತ ಕ್ಷೀಣಿಸಿತ್ತು. ನೋಡಿದರೆ ಅವರನ್ನು ಗುರುತಿಸಲಾಗುತ್ತಿರಲಿಲ್ಲ.[೩] ಶರತ್ ಮಹಾರಾಜರು ಶ್ರೀಮಾತೆಯವರ ಚಿಕಿತ್ಸೆಗೆ ಯಾವರೀತಿಯಲ್ಲೂ ಕೊರತೆಯುಂಟಾಗದಂತೆ ನೋಡಿಕೊಂಡರು. ಹೋಮಿಯೋಪಥಿ, ಆಯುರ್ವೇದ, ಅಲೋಪಥಿ, ಈ ಎಲ್ಲ ಬಗೆಯ ಚಿಕಿತ್ಸೆಗಳೂ ನಡೆದವು. ಕಲ್ಕತ್ತದಲ್ಲಿ ಎಲ್ಲರಿಗಿಂತಲೂ ಪ್ರಸಿದ್ಧ ವೈದ್ಯರಾದ ನೀಲವರಣ ಸರ್ಕಾರ್‌ಗೂ ತೋರಿಸಿದ್ದಾಯಿತು. ಆದರೆ ಯಾವ ಚಿಕಿತ್ಸೆಯಿಂದಲೂ ಶ್ರೀಮಾತೆಯವರಿಗೆ ಗುಣಪಡಿಸಲಾಗಲಿಲ್ಲ. ಕ್ರಮೇಣ ಅವರ ಪರಿಸ್ಥಿತಿ ಚಿಂತಾಜನಕವಾಗತೊಡಗಿತು. ಕೊನೆಕೊನೆಗೆ ಇಂದುವಿನ ತಂದೆ ಮನೆಯ ಕಡೆಗೆ ಬರಲಿಲ್ಲ , 'ಶ್ರೀಮಾತೆಯವರ ಮನೆ'ಯಲ್ಲೇ ಇದ್ದುಬಿಟ್ಟರು. ಕೊನೆಗೆ ಒಂದು ದಿನ ರಾತ್ರಿಯ ಕೊನೆಯ ಯಾಮದಲ್ಲಿ (೧೯೨೦ರ ಜುಲೈ ೨೧ ರಂದು) ಮನೆಗೆ ಓಡೋಡುತ್ತ ಬಂದು ನಮ್ಮನ್ನೆಲ್ಲ ಕರೆದರು. ಅಳುತ್ತಾ ಹೇಳತೊಡಗಿದರು, ''ತಾಯಿ ಇನ್ನಿಲ್ಲ! ಕೊನೆಯಬಾರಿಗೆ ನೀವು ಅವರ ಪಾದಧೂಳಿಯನ್ನು ತಲೆಗೆ ಹಚ್ಚಿಕೊಂಡು ಬನ್ನಿ!'' ನಾನು ಜೋರಾಗಿ ದನಿಯೆತ್ತಿ ಅಳತೊಡಗಿದೆ. ಅವರ ಕಣ್ಣುಗಳಿಂದಲೂ ಒಂದೇ ಸಮನೆ ಅಶ್ರುಧಾರೆ ಸುರಿಯತೊಡಗಿತು. ಹುಚ್ಚರಂತೆ ನಾನು ಮತ್ತು ಇಂದು 'ಉದ್ಬೋಧನ'ದತ್ತ ಓಡಿದೆವು. ಶ್ರೀಮಾತೆಯವರ ಕೋಣೆಯಲ್ಲಿ ಮಂಚದ ಮೇಲೆ ಅವರ ದೇಹವನ್ನು ಮಲಗಿಸಲಾಗಿತ್ತು. ಹೂವು, ಮಾಲೆಗಳಿಂದ ಅವರ ದೇಹ ಆವೃತವಾಗಿತ್ತು. ಸಾಧು, ಬ್ರಹ್ಮಚಾರಿಗಳು ಹಾಗೂ ಭಕ್ತರುಗಳು ಗುಂಪುಗುಂಪಾಗಿ ಬಂದು ಶ್ರೀಮಾತೆಯವರಿಗೆ ಅಂತಿಮ ಪ್ರಣಾಮವನ್ನು ಸಲ್ಲಿಸುತ್ತಿದ್ದಾರೆ. ಎಲ್ಲರ ಕಣ್ಣುಗಳಲ್ಲೂ ನೀರಿಳಿಯುತ್ತಿದೆ. ಎಲ್ಲೆಡೆ ಅತ್ಯಂತ ದುಃಖದ ಒಂದು ಸನ್ನಿವೇಶವಿತ್ತು. ನಾನು ಮತ್ತು ಇಂದು ಶ್ರೀಮಾತೆಯವರ ಚರಣಗಳಲ್ಲಿ ತಲೆಯಿಟ್ಟು ನಮ್ಮ ಅಂತಿಮ ಪ್ರಣಾಮವನ್ನು ಸಲ್ಲಿಸಿದೆವು. ಸಾಧುಗಳ ನಡುವಿನಿಂದ ಯಾರೋ ಹೇಳಿದಂತಾಯಿತು, ''ಚಂದ್ರಬಾಬುವಿನ ಪತ್ನಿಗೆ ಶ್ರೀಮಾತೆಯವರ ಪಾದಚಿಹ್ನೆ ಒಂದನ್ನು ಕೊಡಿ'' ಎಂಬುದಾಗಿ. ಶ್ರೀಮಾತೆಯವರ ಪಾದಗಳಿಗೆ ಅಲತಾ ಹಚ್ಚಿ , ಹೊಸ ಬಟ್ಟೆಯನ್ನು ಅದಕ್ಕೊತ್ತಿ, ಅವರ ಚರಣಮುದ್ರೆಯನ್ನು ತೆಗೆಯಲಾಗಿತ್ತು. ಆ ಅತ್ಯಮೂಲ್ಯವಾದ ಪಾದಚಿಹ್ನೆಯನ್ನು ಯಾರೋ ಒಬ್ಬರು ತಂದು ನನ್ನ ಕೈಗಿತ್ತರು. ನಾನು ಅದನ್ನೇನೋ ತೆಗೆದುಕೊಂಡೆ, ಆದರೆ ಕೂಡಲೇ ನನ್ನ ಎದೆಯಲ್ಲಿದ್ದ ಆವೇಗದ ಏರಿಳಿತವೆಲ್ಲ ಒಮ್ಮೆಲೆ ಮೇಲಕ್ಕೆದ್ದು ಬಂತು. ಈಗ ನನಗೆ ತಿಳಿಯಿತು, ನಿಜವಾಗಿಯೂ ಶ್ರೀಮಾತೆ ಹೊರಟೇಹೋದರು ಎಂಬುದಾಗಿ. ಹೃದಯವೆಲ್ಲ ಚೂರುಚೂರಾದಂತೆ ಅನ್ನಿಸತೊಡಗಿತು. ಸ್ವಲ್ಪ ಹೊತ್ತಿನ ನಂತರ ಮನೆಗೆ ಮರಳಿದೆ. ಶ್ರೀಮಾತೆಯವರ ಮನೆಯಲ್ಲಿ ಇನ್ನು ನಿಲ್ಲಲು ಜಾಗವಿಲ್ಲ. ಭಕ್ತರಿಗೆಲ್ಲಾ ಸುದ್ದಿ ತಿಳಿದುಹೋಗಿದೆ. 'ಉದ್ಬೋಧನ'ವೆಲ್ಲ ಭಕ್ತರಿಂದ ತುಂಬಿಹೋಯಿತು. ಎಲ್ಲರ ಕಣ್ಣುಗಳಲ್ಲೂ ಅಶ್ರುಧಾರೆ. ನಾನು ಒಂದೇ ಸಮನೆ ಅಳುತ್ತಾ ಇಂದುವಿನ ಕೈಹಿಡಿದುಕೊಂಡು 'ಶ್ರೀಮಾತೆಯವರ ಮನೆ'ಯಿಂದ ಹೊರಟೆ. ನನಗನ್ನಿಸಿತು, ಮನೆಯಲ್ಲಿ ಎಲ್ಲರೂ ಇದ್ದಾರೆ, ಶ್ರೀಮಾತೆಯವರ ಮನೆಯಲ್ಲೂ ಶ್ರೀಮಾತೆಯವರನ್ನು ಬಿಟ್ಟು ಇನ್ನೆಲ್ಲರೂ ಇದ್ದಾರೆ; ಆದರೆ ನನ್ನ ಪಾಲಿಗೆ ಇಡೀ ಜಗತ್ತೇ ಶೂನ್ಯವಾಗಿ ಹೋಗಿದೆ. ❖

---

೨ ಕಾರ್ತಿಕಚಂದ್ರ ದತ್ತ ತಿಳಿಸುತ್ತಾರೆ, ಅವರ ಅಕ್ಕನಿಗೆ ೨೪ ವಯಸ್ಸು ಆಗಿದ್ದಾಗ ಆಕೆಯ ಪತಿ ಅಕಾರಣವಾಗಿ ಎಲ್ಲಿಗೋ ಹೊರಟು ಹೋಗಿಬಿಟ್ಟ; ಎಂದಿಗೂ ಮನೆಗೆ ಮರಳಿ ಬರಲಿಲ್ಲ. ಅವರ ಅಣ್ಣ (ಅಮೂಲ್ಯ) ೪೦ ವರ್ಷ ವಯಸ್ಸಿನಲ್ಲೇ ಮರಣಹೊಂದಿದ. ಅವರ ತಾಯಿ ಈ ಎರಡು ದುಃಖದ ಘಟನೆಗಳನ್ನು ಎದುರಿಸಬೇಕಾಯಿತು. ಅವರ ತಂದೆ ಬದುಕಿದ್ದಾಗ, ಅವರ ಅಕ್ಕನ ವಿಷಯವಾಗಿ ಅವರು ದುಃಖವನ್ನು ಅನುಭವಿಸಿದರು. *(-ಸಂ)*

೩ ಶ್ರೀಮಾತೆಯವರು ಜಯರಾಮಬಾಟಿಯಿಂದ ಕಲ್ಕತ್ತೆಗೆ ಕೊನೆಯ ಬಾರಿ ಬಂದುದು ೧೯೨೦ ರ ಫೆಬ್ರವರಿ ೨೭ ರಂದು. ಅತ್ಯಂತ ಜೀರ್ಣವಾಗಿದ್ದ ಅವರ ದೇಹವನ್ನು ನೋಡಿ ಗೋಲಾಪ್ ಮಾ ಹಾಗೂ ಯೋಗಿನ್-ಮಾ ದಂಗಾಗಿಬಿಟ್ಟಿದ್ದರು. ದುಃಖಿತರಾಗಿ ಅವರು ಶ್ರೀಮಾತೆಯವರ ಜೊತೆಗೆ ಬಂದಿದ್ದವರಿಗೆ ಹೇಳಿದರು, ''ನೀವು ಎಂಥ ತಾಯಿಯನ್ನು ಕರೆದುಕೊಂಡು ಬಂದಿದ್ದೀರಿ? ಬರೀ ಚರ್ಮ ಹಾಗೂ ಮೂಳೆ ಇವನ್ನು ಮಾತ್ರ ಕರೆತಂದಿರಾ?'' *('ಶ್ರೀಮಾ ಶಾರದಾದೇವಿ', ಸ್ವಾಮಿ ಗಂಭೀರಾನಂದ, ಪು.೬೪೪)*